**<u>ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ, ಕೆ.ಆರ್ ನಗರ</u>**

**<u>ಸಿ.ಸಿ. ನಂ. 1706/2021</u>**

**ಫಿರ್ಯಾದಿಃ** **ಅಬಕಾರಿ** ಪೊಲೀಸರು

**ವಿರುದ್ಧ**

**ಆರೋಪಿತರುಃ**

**1.** ರಾಜು.ಎಸ್ ಬಿನ್ ಶಿವಣ್ಣ.ಎಸ್.ಕೆ, 35 ವರ್ಷ, ವಾಸಃ ಮಾದೇಗೌಡರ ಬೀದಿ, ಸಾಲಿಗ್ರಾಮ ಟೌನ್, ಕೆ.ಆರ್.ನಗರ ತಾಲ್ಲೂಕು

2. ಮುತ್ತರಾಜು @ ಮುತ್ತು, 36 ವರ್ಷ, ವಾಸಃ ಹೊಸಬೀದಿ, ಸಾಲಿಗ್ರಾಮ ಟೌನ್, ಕೆ.ಆರ್.ನಗರ ತಾಲ್ಲೂಕು.

**3.** ಶ್ರೀನಿವಾಸ ಬಿನ್ ಲೇಟ್ ಜವರೇಗೌಡ, 36 ವರ್ಷ, ವಾಸಃ ಕಾಲುವೆ ಬೀದಿ, ಸಾಲಿಗ್ರಾಮ ಟೌನ್, ಕೆ.ಆರ್.ನಗರ ತಾಲ್ಲೂಕು.

4. ಮಂಜು.ಎಸ್.ಟಿ ಬಿನ್ ತುಳಸಿರಾಮೇಗೌಡ, 39 ವರ್ಷ, ವಾಸಃ ಕಾಲುವೆ ಬೀದಿ, ಸಾಲಿಗ್ರಾಮ ಟೌನ್, ಕೆ.ಆರ್.ನಗರ ತಾಲ್ಲೂಕು.

**<u>ದೋಷಾರೋಪಣೆ</u>**

**ಶ್ರೀ ಚಂದನ್.ಎಸ್ ಬಿ.ಕಾಂ., ಎಲ್.ಎಲ್.ಬಿ.** ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿ ನ್ಯಾಯಾಧೀಶರು, ಕೆ.ಆರ್.ನಗರ, ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮ ಮೇಲೆ ಈ ಕೆಳಗಿನಂತೆ ಆರೋಪಿಸುವುದೇನೆಂದರೆಃ

ದಿನಾಂಕ 21.04.2020 ರಂದು ಬೆಳಗ್ಗೆ 4.35 ಗಂಟೆ ಸಮಯದಲ್ಲಿ ಬಳ್ಳೂರು ರಸ್ತೆಯಲ್ಲಿ ರಾಜು ವೈನ್ಸ ಅಂಗಡಿಯಲ್ಲಿ ಆರೋಪಿತರಾದ ನೀವುಗಳು ಕಾನೂನು ಬಾಹಿರವಾಗಿ ಅಕ್ರಮವಾಗಿ ಮದ್ಯದ ಅಂಗಡಿ ತೆರೆದು ಕೋವಿಡ್ 19 ವೈರಾಣು ಹರಡುವಿಕೆಯನ್ನು ತಡೆಯು ಸಂಬಂದ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ HFW 54 CGM-2020 Bengaluru dated 23.03.2020 ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು ಮೈಸೂರು ಜಿಲ್ಲೆ ಮೈಸೂರು ರವರ ಆದೇಶ ನಂ./ಎಂ.ವೈ.ಎಸ್/ಡಿ.ಸಿ/ಎಂ.ಎ.ಜಿ(1)/ಎಂ.ಎಲ್.ಒ/70/2020 ಇ-95753 ದಿಃ 25.03.2020 ರ ಆದೇಶದಂತೆ ಮೈಸೂರು ಜಿಲ್ಲೆ ಯಾದ್ಯಂತ ಲಾಕ್ ಡೌನ್ ಆದೇಶವಾಗಿದ್ದು ಮತ್ತು ಮದ್ಯ ಮಾರಾಟದ ನಿಷೇದ ಆದೇಶದಂತೆ ಮತ್ತು ಸದರಿ ಆದೇಶದಂತೆ ಅಗತ್ಯ ಸೇವೆಗಳನ್ನು ಹೊರತುಪಡಿಸಿ ಎಲ್ಲಾ ಅಂಗಡಿ ಮುಂಗಟ್ಟುಗಳನ್ನು ತೆರೆಯದಂತೆ ಆದೇಶಿಸಿದ್ದು ಅದರಂತೆ ಸಾಲಿಗ್ರಾಮ ಟೌನ್ ನಲ್ಲಿ ಸಾರ್ವಜನಿಕರಿಗೆ ತಿಳುವಳಿಕೆ ಮೂಡಿಸಲು ಪ್ರಚಾರ ಮಾಡಲಾಗಿದರೂ ಕೂಡ ಸರ್ಕಾರದ ಆದೇಶವನ್ನು ಉಲ್ಲಂಘನೆ ಮಾಡಿರುತ್ತೀರಿ. ಆ ಪ್ರಕಾರ ಭಾರತೀಯ ದಂಡ

ಸಂಹಿತೆ ಕಲಂ 188 ಸಹವಾಚನ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾವನೆಯಲ್ಲಿ ಮಾಡಿರುತ್ತೀರೆಂದು ಆಪಾದಿಸುತ್ತೇನೆ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶ ಹೊಂದಿದ್ದು, ಆರೋಪಿತರಾದ ನೀವುಗಳು ಸಾರ್ವಜನಿಕರಿಗೆ ಅಕ್ರಮವಾಗಿ ಮದ್ಯ ಮಾರಾಟ ಮಾಡಲು 288 ಒರಿಜಿನಲ್ ಚಾಯ್ಸ ವಿಸ್ಕಿ 90 ಎಂ.ಎಲ್ ನ ಟೆಟ್ರಾ ಪ್ಯಾಕೇಟ್‌ಗಳನ್ನು 42% ಅಂಶವಿರುದ ಸುಮಾರು 9216/- ರೂಪಾಯಿ ಬೆಲೆ ಬಾಳುವ 90 ಎಂ.ಎಲ್ ಒರಿಜಿನಲ್ ಚಾಯ್ಸ ಡಿಲಕ್ಸ ವಿಸ್ಕಿ ಯನ್ನು ಅಕ್ರಮವಾಗಿ ಅಂಗಡಿ ತೆರೆದು ಮಾರಾಟ ಮಾಡಲು ಸಾಗಾಣಿಕೆ ಮಾಡಿರುತ್ತೀರಿ. ಆ ಮೂಲಕ ನೀವು ಕರ್ನಾಟಕ ಅಬಕಾರಿ ಅಧಿನಿಯಮ ಕಲಂ 32 ಮತ್ತು 34 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ ಎಂಬುದಾಗಿ ನಿಮ್ಮ ಮೇಲೆ ದೋಷಾರೋಪಣೆ ಮಾಡಲಾಗಿದೆ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶ ಹೊಂದಿದ್ದು, ತನಿಖಾ ಕಾಲದಲ್ಲಿ ಚಾಸಾ 1 ರವರು ದಾಳಿ ನಡೆಸಿ ಅಮಾನತ್ತು ಪಡಿಸಿಕೊಂಡಿರುವುದು ಮತ್ತು ಕೋವಿಡ್ 19 ಹಿನ್ನೆಲೆಯಲ್ಲಿ ಸಾರ್ವಜನಿಕ ಶಾಂತಿಯನ್ನು ಕಾಪಾಡಲು ಮತ್ತು ಮದ್ಯದ ಅಂಗಡಿ ಮುಂಗಟ್ಟುಗಳನ್ನು ತೆರೆಯದಂತೆ ಸರ್ಕಾರದ ಆದೇಶವಿದ್ದರೂ ಕೂಡ ಸರ್ಕಾರದ ಆದೇಶವನ್ನು ಉಲ್ಲಂಘನೆ ಮಾಡಿ ಹಾಗೂ ಪ್ರಾಣಕ್ಕೆ ಅಪಾಯಕಾರಿಯಾದ ರೋಗದ ಸೋಂಕನ್ನು ಹರಡುವ ಸಂಭವವಿರುವ ಉದ್ದೇಶ ಪೂರ್ವದ ಕೃತ್ಯವನ್ನು ಮಾಡಿರುತ್ತೀರಿ. ಆ ಪ್ರಕಾರ ಭಾರತೀಯ ದಂಡ ಸಂಹಿತೆ ಕಲಂ 270 ಸಹವಾಚನ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾವನೆಯಲ್ಲಿ ಮಾಡಿರುತ್ತೀರೆಂದು ಆಪಾದಿಸುತ್ತೇನೆ.

ಸದರಿ ಮೇಲಿನ ಆರೋಪಗಳ ಬಗ್ಗೆ ನಿಮ್ಮನ್ನು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಪಡಿಸಿರುತ್ತೇನೆ.

(ಚಂದನ್ ಎಸ್)
ಹೆಚ್ಚುವರಿ ಸಿವಿಲ್ ಮತ್ತು ನ್ಯಾಯಿಕ ದಂಡಾಧಿಕಾರಿಗಳು,
ಕೆ.ಆರ್.ನಗರ.

ಆರೋಪಿ ಸಹಿಃ

ದಿನಾಂಕಃ 01.09.2023